# ಪ್ರಾರ್ಥನೆ

ಪ್ರಾರ್ಥನೆಯು ವ್ಯಕ್ತಿಯ ಅಂತರ-ಬಾಹ್ಯಗಳನ್ನು ಶೋಧಿಸಿ ವ್ಯಕ್ತಿತ್ವಕ್ಕೆ ಹೊಸ ಆಯಾಮವನ್ನು ನೀಡುತ್ತದೆ. ಉತ್ತಮೋತ್ತಮ ಸ್ತರಗಳಿಗೆ ಪ್ರಾರ್ಥಿಸುವವನ್ನು ಏರಿಸುತ್ತದೆ ಎಂದು ತಿಳಿಸಿರುವ ಲೇಖಕರು ಮೈಸೂರಿನ ನಿವಾಸಿಗಳು. ಸದ್ವಿದ್ಯಾ ಪಾಠಶಾಲೆಯಲ್ಲಿ ಕನ್ನಡ ಉಪನ್ಯಾಸಕರು.

ಡಾ. ಎಚ್. ಪಾಂಡುರಂಗ ವಿಠಲ

**ಜೀ**ವಜಗತ್ತಿನಲ್ಲಿ ಅಸ್ತಿತ್ವ ಬಹು ಮುಖ್ಯ. ಕೆಳಹಂತದ ಜೀವಿಗಳು ಲಕ್ಷಾಂತರ ಮೊಟ್ಟೆಗಳನ್ನಿಟ್ಟು, ಅವುಗಳ ಜೋಪಾಸನೆ ಮಾಡದಿದ್ದರೂ ಉಳಿದುಬರುತ್ತವೆ. ಸ್ವಲ್ಪ ಮೇಲಿನ ಹಂತದವು ಮೊಟ್ಟೆಗೆ ಕಾವು ಕೂತು, ಮರಿ ಮಾಡಿ, ಗುಟುಕು ಕೊಟ್ಟು ಸಂತತಿಯನ್ನು ಪೋಷಿಸುತ್ತವೆ. ಸಸ್ತನಿಗಳು ಇನ್ನೂ ದೀರ್ಘಕಾಲ ಹಾಲು ಕೊಟ್ಟು ಮರಿಗಳನ್ನು ಪೋಷಿಸುತ್ತವೆ. ಅಲ್ಲದೆ ಅಸ್ತಿತ್ವದ ಮೂಲಭೂತ ಸಮಸ್ಯೆಗಳಾದ ಆಹಾರಸಂಪಾದನೆ, ಸ್ವರಕ್ಷಣೆಗಳ ಬಗ್ಗೆ ತರಬೇತಿಯನ್ನೂ ನೀಡುತ್ತವೆ. ಆಹಾರ, ರಕ್ಷಣೆಗಳ ಸಮಸ್ಯೆಯನ್ನು ಮಾನವ ಪರಿಹರಿಸಿಕೊಂಡು ಅಪಾರ ಪ್ರಗತಿ ಸಾಧಿಸಿದ್ದರೂ, ಅವಲಂಬನೆ ಅವನಿಗೆ ಬೇಕೇ ಬೇಕು.

ತಂದೆತಾಯಿಯರ ಮೇಲೆ ಮಾನವ ಸುದೀರ್ಘ ಕಾಲದವರೆಗೆ ಅವಲಂಬಿತನಾಗಿರುತ್ತಾನೆ. ಬುದ್ಧಿ ಪಕ್ವವಾದ ಮೇಲೂ ಮುಂದುವರೆಯತ್ತದೆ ಈ ಅವಲಂಬನೆ. ತನ್ನದೇ ಆದ ಭಾವನಾ ರಾಜ್ಯವೊಂದನ್ನು ಕಟ್ಟಿಕೊಂಡ ಮಾನವನಿಗೆ ಸುರಕ್ಷೆಯ, ಸುಭದ್ರತೆಯ ನೆಮ್ಮದಿ ಬೇಕೇಬೇಕು. ಚಿಕ್ಕಂದಿನಲ್ಲಿ ಅವನಿಗೆ ಅಪ್ಪ-ಅಮ್ಮ ಸರ್ವಶಕ್ತರಾಗಿ ಕಂಡು, ಎಲ್ಲ ಅಗತ್ಯಗಳನ್ನೂ ಪೂರೈಸುವರು. ಬುದ್ಧಿ ಬೆಳೆದ ಮೇಲೆ ಅವರ ಪರಿಮಿತಿ ಅವನಿಗೆ ತಿಳಿಯುತ್ತದೆ. ಆದರೂ ಅಂತಹ ಒಂದು ಶಕ್ತಿಯ, ಭಾವನೆಯ ಅಗತ್ಯ, ಆ ಶಕ್ತಿಗೆ ಪ್ರಾರ್ಥನೆ ಮಾಡಿ, ನೆಮ್ಮದಿ ಪಡೆಯುವುದು ಅವಶ್ಯಕವೆನಿಸುತ್ತದೆ.

ನಮ್ಮಲ್ಲಿ ಬಹುಜನರ ಪ್ರಾರ್ಥನೆಯು ಕೋರಿಕೆ, ರಕ್ಷಣೆ, ನೆಮ್ಮದಿಗಳನ್ನು ಪಡೆಯುವುದಾಗಿದೆ. ಪ್ರಾರ್ಥನೆ ಮಾಡಿದಾಗ ಅನಿಶ್ಚಯತೆ ಮಾಯವಾಗಿ, ಭರವಸೆ ಮನಸ್ಸನ್ನು ತುಂಬಿಕೊಳ್ಳುತ್ತದೆ. ಸಮಸ್ಯೆ ಎದುರಾದಾಗ ಅಪ್ಪ-ಅಮ್ಮನನ್ನು ಆಶ್ರಯಿಸಿ, ಆತಂಕವನ್ನು ನಿವಾರಿಸಿಕೊಳ್ಳುವ ಮಗುವಿಗೂ, ಇಂತಹ ಪ್ರಾರ್ಥನೆ ಮಾಡುವವರಿಗೂ ಹೆಚ್ಚಿನ ವ್ಯತ್ಯಾಸವಿಲ್ಲ. ಅಲ್ಲಿ ಹಾರೈಕೆ, ಆಶೀರ್ವಾದಕ್ಕಾಗಿ ನಮಸ್ಕಾರ; ಇಲ್ಲಿ ಸುರಕ್ಷೆ, ನೆಮ್ಮದಿ, ಕೊರತೆಯ ನಿವಾರಣೆಗಾಗಿ ಪೂಜೆ, ವ್ರತ, ಪ್ರಾರ್ಥನೆ. ಸಂಕಟ ಬಂದಾಗ ವೆಂಕಟರಮಣ ಎಂಬ ಗಾದೆ ಇದನ್ನೆ ಸೂಚಿಸುತ್ತದೆ. ಪವಾಡಪುರುಷರ ಬಳಿ ಇಂತಹ ಭಕ್ತರು ಹಿಂಡುಗಟ್ಟಲೆ ನೆರೆಯುವುದು ಸಾಮಾನ್ಯ.

ಆದರೆ ಆಧ್ಯಾತ್ಮಿಕ ಸಾಧನೆ ಮಾಡಬಯಸುವವರಿಗೆ, ಕೇವಲ ಸ್ವಪ್ರಯತ್ನ ಸಾಲದು ಎಂಬ ಅನುಭವವಾಗುತ್ತದೆ. ಸಂಶೋಧಕರಿಗೆ ಬಗೆಹರಿಯದ ಸಮಸ್ಯೆ ಮನಸ್ಸಿನಲ್ಲಿ ತುಂಬಿಕೊಂಡು ನಿದ್ದೆಯಲ್ಲೋ, ಅರೆ ಎಚ್ಚರದಲ್ಲೋ ಪರಿಹಾರ ಗೋಚರಿಸುತ್ತದೆ. ಹೀಗೆ ತನಗಿಂತ ದೊಡ್ಡದು ಎದುರಾದಾಗ ಪ್ರಾರ್ಥಿಸುವ ವಿನಯ ತನ್ನಿಂದ ತಾನೇ ಬರುತ್ತದೆ. ಇಂತಹ ಪ್ರಾರ್ಥನೆ ಕೃತಜ್ಞತೆಯ ಸಮರ್ಪಣೆ. ನನ್ನನ್ನು ನಿನ್ನವನನ್ನಾಗಿಸಿಕೋ, ನಾನು ಯಂತ್ರ ನೀನು ಯಂತ್ರಿ ಎಂದು ಹೃದಯದುಂಬಿ ಪ್ರಾರ್ಥಿಸಲು ಆಗುವುದೇ ಸಾಧನೆಯ ಒಂದು ಹಂತ. ಇಲ್ಲಿ ಪ್ರಾರ್ಥನೆ ಎಂಬುದು ಯಾವುದೋ ಒಂದು ಸಮಯದಲ್ಲಿ ಮಾಡುವ ಕ್ರಿಯೆಯಾಗದೆ, ಪ್ರಜ್ಞೆಯ ಒಂದು ಭಾಗವಾಗಿಬಿಟ್ಟಿರುತ್ತದೆ.

ನೈಜವಾದ ಪ್ರಾರ್ಥನೆ ಎಲ್ಲರನ್ನೂ ಒಳಗೊಂಡಿರುತ್ತದೆ, ಎಲ್ಲವನ್ನೂ ಒಳಗೊಂಡಿರುತ್ತದೆ, ಸ್ವಾರ್ಥರಹಿತವಾಗಿರುತ್ತದೆ. ತಂದೆಯನ್ನು ಕಳೆದುಕೊಂಡ ನರೇಂದ್ರ ತೀರ ಕಷ್ಟದಲ್ಲಿದ್ದ. ಶ್ರೀರಾಮಕೃಷ್ಣ ಪರಮಹಂಸರು ಈ ಕಷ್ಟಗಳನ್ನು ಪರಿಹರಿಸಲು ಕಾಳಿಯನ್ನು ಪ್ರಾರ್ಥಿಸಲು ಹೇಳಿದರು. ಆದರೆ ದೇವಿಯ ಮುಂದೆ ನಿಂತಾಗ ಅದು ವಿಗ್ರಹವಲ್ಲ, ಚಿನ್ಮಯಮೂರ್ತಿ ಎಂದು ನರೇಂದ್ರನಿಗೆ ಕಾಣಿಸಿತು. ಭಾವಾವೇಶದಿಂದ ನಮಸ್ಕರಿಸಿ, ಆತ ಕೇಳಿಕೊಳ್ಳುವುದು, "ಅಮ್ಮ! ಭಕ್ತಿ, ಜ್ಞಾನ, ವಿವೇಕಗಳನ್ನು ನೀಡು, ವೈರಾಗ್ಯವನ್ನು ನೀಡು, ನಿರಂತರವಾಗಿ ನಿನ್ನನ್ನು ನೋಡುತ್ತಿರುವಂತೆ ಕರುಣಿಸು" ಎಂದು. ಹೃದಯದ ಗಲಿಬಿಲಿಯೆಲ್ಲ ಶಾಂತವಾಗಿ ಆತ ಶ್ರೀರಾಮಕೃಷ್ಣರ ಬಳಿ ಬರುತ್ತಾನೆ. ಪರಮಹಂಸರು "ನಿನ್ನ ಮನೆಯ ಕಷ್ಟಗಳನ್ನು ಪರಿಹರಿಸುವಂತೆ ತಾಯಿಯನ್ನು ಕೇಳಿದೆಯಾ?" ಎಂದಾಗ ತನ್ನ ಮರೆವಿಗೆ ನಾಚಿ ಪುನಃ ಕಾಳಿಯ ಬಳಿ ಹೋಗುತ್ತಾನೆ. ತನ್ನ ಕಷ್ಟಪರಂಪರೆ ನೆನಪಾದರೂ, ತನಗಾಗಿ ಬೇಡಲು ನಾಚಿಕೆಯಾಗುತ್ತದೆ. "ಚಕ್ರವರ್ತಿಯ ಮುಂದೆ ನಿಂತು ಬದನೆಕಾಯಿ ಬೇಡುವುದೇ?" ಎನಿಸುತ್ತದೆ. ಹೀಗಾಗಿ ಹಿಂದಿನಂತೆಯೇ ಭಕ್ತಿ-ಜ್ಞಾನ-ವೈರಾಗ್ಯಗಳಿಗಾಗಿ, ನಿರಂತರ ದರ್ಶನಕ್ಕಾಗಿ ಪ್ರಾರ್ಥಿಸುತ್ತಾನೆ. ಈ ಪ್ರಾರ್ಥನೆಯಿಂದ ಅವನಲ್ಲಿ ಬದಲಾವಣೆ ಉಂಟಾಗುತ್ತದೆ. ನಿರ್ಗುಣ ನಿರಾಕಾರ ಭಗವಂತನನ್ನು